ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ

ಚನ್ನಗಿರಿ .

ಸಿಸಿ ನಂ.**343/2021**

ಹೆಸರುಃ ತಿಪ್ಪೇಶಪ್ಪ ಚಾಸಾಃ

ತಂದೆಃ ರಂಗಪ್ಪ ಪ್ರಾಸಾ: 9

ವಯಸ್ಸುಃ 47

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಸಾಸ್ವೆಹಳ್ಳಿ, ಹೊನ್ನಾಳಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 18-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ದಂ ಪ್ರ.ಸಂ ಕಲಂ 299 ರಡಿಯಲ್ಲಿ**

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಸನ್ 2011-12 ರಲ್ಲಿ ಈಗ ನಾನು ನೋಡುತ್ತಿರುವ ನಿಪಿ 4 ರ ಅಮಾನತ್ತು ಮಹಜರ್ ಗೆ ಸಹಿ ಮಾಡಿರುತ್ತೇನೆ. ಅದಕ್ಕೆ ಸಹಿಯನ್ನು ಎಲ್ಲಿ ಯಾವಾಗ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಅದನ್ನು ಮಹಜರ್ ಸಂಬಂದವಾಗಿ ಸಹಿಯನ್ನು ಪಡೆದಿರುತ್ತಾರೆ. ಆರೋಪಿ ನನಗೆ ಗೊತ್ತಿಲ್ಲ. ನನ್ನ ನೆನಪಿನಂತೆ ಠಾಣೆಗೆ ಹೋದಾಗ ನಿಪಿ 4 ಕ್ಕೆ ಸಹಿಯನ್ನು ಮಾಡಿರುತ್ತೇನೆ ಉಳಿದ ಸಂಗತಿಗಳು ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 08.09.2011 ರಂದು ಭದ್ರಾವತಿ ತಾಲ್ಲೂಕಿನ ಕಲ್ಲಜ್ಜನಾಳ್ ಗ್ರಾಮದ ಜೋಗಮ್ಮನರ ಚಂದ್ರಮ್ಮನವರ ವಾಸದ ಮನೆಯ ಬಳಿ ನಾನು ಮತ್ತು ಚಾಸಾ 3 ರವರು ನಿಪಿ 4 ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕಳ್ಳತನದ ಅಪರಾದದಡಿಯಲ್ಲಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿ ಆತನನ್ನು ನಮಗೆ ತೋರಿಸಿ ನಿಪಿ 4 ರಂತೆ ಸ್ಥಳದಲ್ಲಿ ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಸದರಿ ಮನೆಯಲ್ಲಿ ಆರೋಪಿಗಳು ಹಾಜರಿದ್ದರು

ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳನ್ನು ಸ್ಥಳದಲ್ಲಿ ವಿಚಾರಗೊಳಪಡಿಸದಾಗ 1 ನೇ ಆರೋಪಿ ತಾನು ಮತ್ತು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಸೇರಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಮನೆಯ ಪಕ್ಕದ ಓಣಿಯಲ್ಲಿ ತೆಂಗಿನ ಗರಿಯ ಬಣವೆಯಲ್ಲಿ ಮುಚ್ಚಿಟ್ಟ ಕಳ್ಳತನದ 3 ದ್ವಿಚಕ್ರ ವಾಹನಗಳನ್ನು ಆರೋಪಿಗಳು ನಮ್ಮ ಸಮಕ್ಷಮ ಪೊಲೀಸರಿಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ಮನೆಯಲ್ಲಿದ್ದ 1 ದ್ವಿಚಕ್ರ ವಾಹನವನ್ನು ತೋರಿಸಿ ಅದು ಸಹ ಕಳ್ಳತನ ವಾಹನ ಎಂದು ನಮ್ಮ ಮುಂದೆ  ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಎಲ್ಲಾ ವಾಹನಗಳನ್ನು ಬೆಳಗ್ಗೆ 6.00 ರಿಂದ 7.00 ರವರೆಗೆ ನಿಪಿ 4 ರಂತೆ ಮಹಜರ್ ನ್ನು ಬರೆದು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ರೀತಿ ಕುಮಾರ ರಾಮ್ ಪುರ ರಸ್ತೆಯಲ್ಲಿರುವ ಜೇಮ್ ರೂಂನ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಬಚ್ಚಿಟ್ಟ ಬೈಕ್ ಗಳನ್ನು ತೋರಿಸಿ ಹಾಜರುಪಡಿಸಿರುತ್ತಾನೆ ಎಂದರೆ ಸರಿಯಲ್ಲ.  ಅಲ್ಲಿಯೂ ಸಹ 3 ಬೈಕ್ ಗಳನ್ನು ವಶಕ್ಕೆ ಪಡೆದು 7.15 ರಿಂದ  8.30 ರ ಸಮಯದಲ್ಲಿ ಮಹಜರ್ ನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ಕುಮಾರ ಹುಣಸೆಗಟ್ಟದ ಮರಿಯಪ್ಪನ ಬಳಿ ಒಂದು ದ್ವಿಚಕ್ರ ವಾಹನವನ್ನು ಅಡವಿಟ್ಟಿರುವುದಾಗಿ ಮತ್ತು ಉಳಿದ ವಾಹನಗಳನ್ನು ಶಿಕಾರಿಪುರ ಮುಕ್ತನಹಳ್ಳಿ ಗ್ರಾಮದಲ್ಲಿ ಅಡವಿಟ್ಟಿರುವುದಾಗಿ ನಮ್ಮ ಸಮಕ್ಷಮ ನಿಪಿ 4 ರ ಕಾಲಕ್ಕೆ ಹೇಳಿರುತ್ತಾನೆ ಎಂದರೆ ಸರಿಯಲ್ಲ.  ನಾನು ಮತ್ತು ಚಾಸಾ 3 ರವರು ಸೇರಿ ನಿಪಿ 4 ರ ಮಹಜರ್ ಕಾಲಕ್ಕೆ ಹಾಜರಿದ್ದು ವಾಹನಗಳನ್ನು ಗುರುತಿಸಿ ಸಹಿಗಳನ್ನು ಮಾಡಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ  ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**